ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 45/2019.

ಫ್ರಾ.ಸಾ.ಃ3
ಚಾ.ಸಾ.ಃ8

ಹೆಸರು ಃ ಎ ಪಿ ವಿಶ್ವನಾಥ್
ತಂದೆಯ ಹೆಸರು ಃ ಪರಂಗಪ್ಪ
ವಯಸ್ಸು ಃ 49 ವರ್ಷ
ಉದ್ಯೋಗ ಃ ಹೆಚ್ ಸಿ, ಮಡಿಕೇರಿ ನಗರ ಠಾಣೆ
ವಿಳಾಸ ಃ ಮಡಿಕೇರಿ ನಗರ

... ................................................................................................ ...

ದಿನಾಂಕ 19 ನೇ ಡಿಸೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ದಿನಾಂಕಃ- 04.02.2018 ರಂದು ನಾನು ಠಾಣಾ ಕರ್ತವ್ಯದಲ್ಲಿರುವಾಗ ಸಂಜೆ 07.50 ರ ಸುಮಾರಿಗೆ ಚಾಸಾ 1 ರವರು ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಪರಿಶೀಲಿಸಿ ಪ್ರಕರಣದ ಸಂಖ್ಯೆ 7/18 ದಾಖಲಿಸಿರುತ್ತೇನೆ. ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿ. 07.02.2018 ರಂದು ಕೃತ್ಯ ಸ್ಥಳಕ್ಕೆ ಬೇಟಿ ಮಾಡಿ ಪಂಚರನ್ನು ಸ್ಥಳಕ್ಕೆ ಕರೆದುಕೊಂಡು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಿ ಕಾಫಿ ಗಿಡದ ದೊಣ್ಣೆಯನ್ನು ಅಮಾನತುಪಡಿಸಿರುತ್ತೇನೆ. ಚಾಸಾ 1 ರವರ ಮರುಹೇಳಿಕೆ ಪಡೆದಿರುತ್ತೇನೆ. ಅಮಾನತುಪಸಿಡಿದ ಸ್ವತ್ತುನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆ.

ದಿ. 23.03.2018 ರಂದು ಗಾಯಳುವಿನ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ. ದಿ. 29.05.2018 ರಂದು ಕಂದಾಯ ನೀರಿಕ್ಷಕರಿಂದ ಕೃತ್ಯ ಸ್ಥಳದ ಪಹಣಿ ಪಡೆದಿರುತ್ತೇನೆ. ದಿ. 23.07.2018 ರಂದು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

ನಾನು ಪ ಡೆದ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ ಪಿ 1 ಬಿ ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 5 ಎ ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ನಲ್ಲಿ ಸಾಕ್ಷಿಯ ಸಹಿಯನ್ನು ನಿ ಪಿ 2 ಬಿ ಎಂದು ಗುರುತಿಸಲಾಯಿತು. ಕಂದಾಯ ಪರಿವೀಕ್ಷಕರಿಂದ ಪಡೆದ ದಾಖಲಾತಿಯನ್ನು ಸಾಕ್ಷಿಯ ಸಹಿಯನ್ನು ನಿ ಪಿ 3 ಬಿ ಎಂದು, ಪಹಣಿಯಲ್ಲಿ ಸಾಕ್ಷಿಯ ಸಹಿಯನ್ನು ನಿ ಪಿ 4 ಬಿ ಎಂದು, ಗಾಯದ ಪ್ರಮಾಣ ಪತ್ರವನ್ನು ನಿ ಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 6 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> :- ಆರೋಪಿ 1 ರ ವರಿಂದ :-

ದಿ. 02.04.2016 ರಿಂದ 29.06.2023 ರ ತನಕ ಶ್ರೀಮಂಗಲ ಠಾಣೆಯಲ್ಲಿ ಮಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿ. 04.02.2018 ನಾನು ರಾತ್ರಿ 8 ರಿಂದ 9 ಗಂಟೆ ಸಮಯದಲ್ಲಿ ಪೊ. ಠಾಣೆಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿರುತ್ತೇನೆ ಎಂದರೆ ನಾನು ಆ ದಿನ ರಾತ್ರಿ 8 ಗಂಟೆ ತನಕ ಮಾತ್ರ ಕರ್ತವ್ಯದಲ್ಲಿ ಇದ್ದೆ ಎನ್ನುತ್ತಾರೆ. ನಿ ಪಿ 1 ನ್ನು ನೆಲ್ಲೀರ ರಾಜೇಂದ್ರ ರವರೇ ಬರೆದು ನೀಡಿದರು ಅದನ್ನು ನಾನಗಾಲೀ, ಇತರೇ ಪೊಲೀಸ್ ಅಧಿಕಾರಿಗಳಾಗಲೀ ಬರೆದಿಲ್ಲ ಎನ್ನುತ್ತಾರೆ. ಚಾಸಾ 1 ರವರು ಎದೆ ಹಾಗೂ ಮೈ, ಕೈ ನೋವು ಇದೆ ಎಂದು ತಿಳಿಸಿದರು ಆಗ ನಾನು ಪಿ ಸಿ 203 ಧನಂಜಯ ಮೂಲಕ ಚಾಸಾ 1 ರವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಚಾಸಾ 1 ರವರು ತಾನೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ನೀಡಿದ್ದ ಎಂದು ಚಾಸಾ 1 ತಮ್ಮ ವಿಚಾರಣೆಯಲ್ಲಿ ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಂತಿಮ ವರದಿಯನ್ನು ಸಲ್ಲಿಸುವ ಮೊದಲು ದಾಖಲಾತಿಗಳನ್ನು ಸಂಗ್ರಹಿಸುವ ಕಾರಣ ಸಮಾಯಾವಕಾಶ ತೆಗೆದುಕೊಂಡು ದಿ 23.07.2018 ರಂದು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎನ್ನುತ್ತಾರೆ. ನಾನು ದಿ. 16.11.2018 ರಂದು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಲೈನ್ ಮನೆಯಲ್ಲಿ ವಾಸವಿದ್ದ ಆರೋಪಿ 2 ರವರಿಗೆ ತೊಂದರೆ ನೀಡಿ

ಠಾಣೆಗೆ ಹಾಜರಾಗಬೇಕೆಂದು ಹಿಂಸೆ ನೀಡಿದ್ದೇವೆ ಎಂದರೆ ಸರಿಯಲ್ಲ. ಆ ನಂತರ ನಾನು ಠಾಣೆಗೆ ದೂರವಾಣಿ ಕರೆ ಮಾಡಿ ನೋಟೀಸ್ ಹಾಗೂ ಠಾಣೆಗೆ ಬಂದಿರುವ ದೂರಿನ ಪ್ರತಿ ನೀಡುವಂತೆ ತಿಳಿಸಿದ್ದೇನೆ ಎಂದರೆ ನನಗೆ ಯಾವುದೇ ಕರೆ ಬಂದಿಲ್ಲ ಎನ್ನುತ್ತಾರೆ. ನನಗೆ ಇಂದಿನ ತನಕ ಠಾಣೆಯಿಂದ ದೂರಿನ ಪ್ರತಿ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ 2 ಮತ್ತು ಅವರ ಪತ್ನಿಯನ್ನು ಠಾಣೆಗೆ ಕರೆಸಿ ಒದ್ದು ಒಳಗಡೆ ಹಾಕುತ್ತೇವೆ ಎಂದು ಬೆದರಿಕೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಆರೋಪಿ 2 ಮತ್ತು ಅವರ ಪತ್ನಿ ಠಾಣೆಗೆ ಬಂದಿರುವ ವಿಚಾರ ನನಗೆ ಗೊತ್ತಿಲ್ಲ ನಾನು ಅವರನ್ನು ಕರೆಸಿಲ್ಲ ಎನ್ನುತ್ತಾರೆ. ನನ್ನ ವ್ಯಾಪ್ತಿಯಲ್ಲಿ ಬರುವ ಆಸ್ತಿಯ ಬಗ್ಗೆ ದಾಖಲಾತಿ ಬೇಕೆಂದರೆ ಕಂದಾಯ ಇಲಾಖೆಗೆ ಪತ್ರ ಬರೆಯುತ್ತೇನೆ ಎನ್ನುತ್ತಾರೆ. ನಿ ಪಿ 3 ಮತ್ತು 4 ನ್ನು ಕಂದಾಯ ಇಲಾಖೆ ಯವರು ನೀಡಿದ ನಂತರ ನಾನು ಸರ್ವೆ ನಂ 176/4 ರಲ್ಲಿ 1.45 ಎಕರೆ ಜಮೀನು ಇರುವ ಬಗ್ಗೆ ಸ್ಥಳಕ್ಕೆ ಹೋಗಿ ಪರಿಶೀಲಿಸಿರುವುದಿಲ್ಲ ಎನ್ನುತ್ತಾರೆ. ನನ್ನ ಅಂತಿಮ ವರದಿಯಲ್ಲಿ ಚಾಸಾ 1 ರವರು ವೃತ್ತಿ Fisher man ಎಂದು ನಮೂದಿಸಿದ್ದೇನೆ ಎಂದರೆ ಸರಿ. ಚಾಸಾ 1 ಗೋಣಿಕೊಪ್ಪದಲ್ಲಿ ಮರದ ವ್ಯಾಪರಿ, ಮಿಲ್ ಇಟ್ಟಿದ್ದಾರೆ ಎಂದರೆ ಸರಿ. ಅಂತಿಮ ವರದಿ ಸಲ್ಲಿಸಲು ನಾನು 300 ದಿನ ತೆಗೆದುಕೊಂಡಿಲ್ಲ ಎನ್ನುತ್ತಾರೆ. ನಾನು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ ಪಡೆದಿದ್ದೇನೆ. ದಿ. 09.05.2018 ರಂದು ನಾನು ಕಟ್ಟಡ ಕಟ್ಟುವ ಸ್ಥಳಕ್ಕೆ ಬಂದು ಅಲ್ಲಿ ಕೆಲಸ ಮಾಡುವವರ ಜೊತೆ ಚಾಸಾ 1 ಗಲಾಟೆ ಮಾಡಿದ್ದಾರೆ ಎಂದು ನಾನು ಠಾಣೆಗೆ ದೂರು ನೀಡಿದ್ದೆ ಎಂದರೆ ನನಗೆ ನೆನಪಿಲ್ಲ. ದಿ. 11.05.2018 ರಂದು ನಾನು ಆರೋಪಿ 1 ರವರಿಗೆ ನೋಟೀಸ್ ನೀಡಿ ಕಟ್ಟಡ ಕಟ್ಟುವುದನ್ನು ನಿಲ್ಲಿಸುವಂತೆ ತಿಳಿಸಿದ್ದೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ನನ್ನ ಸಹೋದರ ಪೂವಯ್ಯನವರ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ 2 ರವರ ಪರ ವಕೀಲರವರಿಂದಃ -

ಆರೋಪಿ 1 ಹಾಗೂ ಚಾಸಾ 1 ರವರ ನಡುವೆ ಸಿವಿಲ್ ವ್ಯಾಜ್ಯಗಳ ಬಗ್ಗೆ ನನಗೆ ಮಾಹಿತಿ ಇದೆ ಎನ್ನುತ್ತಾರೆ. ಆರೋಪಿ ಚಾಸಾ 1 ರವರ ವಿರುದ್ಧ ದೂರುಗಳನ್ನು ನೀಡಿದ್ದಾರೆ ಎಂದರೆ ಸರಿ. ಆರೋಪಿ 1 ಮತ್ತು ಚಾಸಾ 1 ರವರ ನಡುವೆ ವ್ಯಾಜ್ಯ ಇರುವ ವಿಚಾರ ತಿಳಿದಿದ್ದರೂ ಸಹ ಆರೋಪಿ 2 ರವರನ್ನು ವಿನಃ ಕಾರಣ ಸೇರಿಸಲಾಗಿದೆ ಎಂದರೆ ಸರಿಯಲ್ಲ. ನಾನು ರೆವಿನ್ಯೂ ಇಲಾಖೆ ಯವರ ಜೊತೆ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಕಾಫಿ ತೋಟ ಇರುವ ಬಗ್ಗೆ

ಜಿಪಿಎಸ್ ಸರ್ವೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಹಾಗೂ ಪಂಚರ ಸಮಕ್ಷಮ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ದೋಣ್ಣೆಯನ್ನು ಸ್ಥಳದಲ್ಲಿ ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನೂಕೂಲವಾಗುವಂತೆ ಸುಳ್ಳು ಗಾಯದ ಪ್ರಮಾಣ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ ನಾನು ಕಂದಾಯ ನೀರಿಕ್ಷಕರಿಗೆ ಯಾವುದೇ ಮನವಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೆ ಸುಳ್ಳು ದೋಷರೋಪಣಾ ಪಟ್ಟಿ ತಯಾರಿಸಿದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮು . ಮಾ ಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u> :- - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)